<u>ಪ್ರಧಾನ ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ</u>

<u>ಸಿ.ಸಿ.ನಂಬರ್:**669/2020**</u>

ಸಿಡಬ್ಲ್ಯೂ: 5
ಪಿಡಬ್ಲ್ಯೂ: 2

| | | |
|---|---|---|
| ಸಾಕ್ಷಿಯ ಹೆಸರು | : | ಪ್ರದೀಪ್ ನಾಯಕ |
| ತಂದೆಯ ಹೆಸರು | : | ಶಂಕರ ನಾಯಕ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಗ್ರಾಮ ಲೆಕ್ಕಿಗ, ಊರುಬಗೆ ವೃತ್ತ, ಗೋಣಿಬೀಡು ಹೋಬಳಿ |
| ವಾಸಸ್ಥಳ | : | ಚಿಕ್ಕಮಗಳೂರು |

ಇಂದು ದಿನಾಂಕ:10.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆ:**</u> ಮಾನ್ಯ ಎಪಿಪಿಯವರಿಂದ:

1. ದಿನಾಂಕ:28.04.2017 ರಂದು ಚಾಸಾ-2 ರವರು ಚಾಸಾ-6 ರವರಿಗೆ ದೂರವಾಣಿ ಕರೆ ಮಾಡಿ, ಹಿರೇಶಿಗರ ಗ್ರಾಮದ ಬಳಿ ಇರುವ ಮರಳು ಸ್ಟಾಕ್ ಯಾರ್ಡ್ ಗೆ ಅವರೊಂದಿಗೆ ಮತ್ತೊಬ್ಬರನ್ನು ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಆ ವಿಚಾರವನ್ನು ಚಾಸಾ-6 ರವರು ನನಗೆ ತಿಳಿಸಿರುತ್ತಾರೆ. ನಂತರ ನಾವಿಬ್ಬರು ಸದರಿ ಮರಳು ಸ್ಟಾಕ್ ಯಾರ್ಡ್ ಗೆ ಹೋಗಿರುತ್ತೇವೆ. ಅಲ್ಲಿಗೆ ಹೋದಾಗ ಪೊಲೀಸ್ ಸಿಬ್ಬಂದಿಗಳು ನಮಗೆ ದಿನಾಂಕ:25.03.2017 ರಂದು ಕೊಲ್ಲಿಬೈಲ್ ಕ್ರಾಸ್ ಬಳಿ ಮರಳು ವಾಹವನ್ನು ತಪಾಸಣೆ ಮಾಡಲಾಗಿ, ಪರ್ಮಿಟ್ ಅವಧಿ ಮುಗಿದಿರುವ ಪರ್ಮಿಟ್ಟನ್ನು ಬಳಸಿ ಅಕ್ರಮವಾಗಿ ಮರಳು ಸಾಗಾಣೆ ಮಾಡಿ ಮಾರಾಟ ಮಾಡುತ್ತಿರುವುದನ್ನು ಹಿಡಿದಿದ್ದು, ಅವರ ವಿರರುದ್ದ ಕಾನೂನು ಕ್ರಮ ಜರುಗಿಸುವ ಸಲುವಾಗಿ ಪಂಚನಾಮೆ ಮಾಡುತ್ತಿರುವುದಾಗಿ ಮತ್ತು ಅದಕ್ಕೆ ನಮ್ಮನ್ನು ಕರೆದಿರುವುದಾಗಿ ತಿಳಿಸಿರುತ್ತಾರೆ. ಆ ಸ್ಥಳದಲ್ಲಿ ಮರಳು ಗುಡ್ಡೆಗಳು ಕಂಡುಬಂದಿದ್ದು ಅಲ್ಲಿ ಪೊಲೀಸರು ಸ್ಥಳ ಮಹಜರನ್ನು ಸಂಜೆ 4.00 ರಿಂದ 4.45 ರ ಅವಧಿಯಲ್ಲಿ ಜರುಗಿಸಿರುತ್ತಾರೆ. ಆಗ ವಾಹನದ ಲಾರಿ ಚಾಲಕನು ಸಹ ಹಾಜರಿದ್ದರು. ಆ ಕಾಲಕ್ಕೆ ಪೊಲೀಸರು ಫೋಟೋವನ್ನು ಸಹ ತೆಗೆದಿರುತ್ತಾರೆ.

2. ಸಾಕ್ಷಿಯು  ಸ್ಥಳ ಮಹಜರ್ ಮತ್ತು ಕಚ್ಚಾ ನಕಾಶೆ ಹಾಗೂ ಅವುಗಳ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲಾತಿಗಳನ್ನು ನಿಪಿ-9 ಮತ್ತು ನಿಪಿ-10 ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-9(ಎ) ಮತ್ತು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2

ಫೋಟೋಗಳನ್ನು ನೋಡಿ ಗುರುತಿಸಿ, ಅವುಗಳನ್ನು ಮಹಜರ್ ಕಾಲಕ್ಕೆ ತೆಗೆಯಲಾಯಿತು ಎಂದು ಗುರುತಿಸಿದ್ದರಿಂದ ಅವುಗಳನ್ನು ನಿಪಿ-11 ಮತ್ತು ನಿಪಿ-12 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಆರೋಪಿ 1 ರಿಂದ 5 ರವರ ಪರ ಶ್ರೀ ಹೆಚ್.ಕೆ.ಡಿ., ವಕೀಲರಿಂದಃ

3. ಚಾಸಾ-6 ರವರಿಗೆ ಮಾಹಿತಿ ಬಂದಾಗ ಗೋಣಿಬೀಡು ನಾಡ ಕಛೇರಿಯಲ್ಲಿ ಇದ್ದೆವು. ಆಗ ನಾನು ಮತ್ತು ಚಾಸಾ-6 ರವರು ಇದ್ದೆವು. ಹಿರೇಶಿಗಿರಕ್ಕೆ ಹೋದಾಗ ಮಧ್ಯಾಹ್ನ 3.30 ರಿಂದ 3.45 ಗಂಟೆಯಾಗಿತ್ತು. ಗೋಣಿಬೀಡಿನಿಂದ ನಾನು ಮತ್ತು ಚಾಸಾ-6 ರವರು ಮಾತ್ರ ಆ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳದಲ್ಲಿ ಒಬ್ಬ ಪೊಲೀಸ್ ಸಿಬ್ಬಂದಿ ಮತ್ತು 3 ಜನ ವಾಹನ ಚಾಲಕರರು ಇದ್ದರು. ಮರಳನ್ನು ಸಂಗ್ರಹಿಸಿದ್ದ ಸ್ಥಳ ಯಾರಿಗೆ ಸೇರಿದ್ದು ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನಾನು ಗೋಣಿಬೀಡು ಹೋಬಳಿಯ ಗ್ರಾಮಲೆಕ್ಕಿಗ ಅಂದರೆ ಸರಿ. ನಿಪಿ-9 ನ್ನು ಪೊಲೀಸರೇ ಬರೆದಿರುತ್ತಾರೆ. ಫೋಟೋಗಳನ್ನು ಮೊಬೈಲ್ ಸಹಾಯದಿಂದ ತೆಗೆಯಲಾಗಿದೆ, ಆದರೆ ಅದನ್ನು ಯಾರು ತೆಗೆದರು ಎಂದು ನನಗೆ ಹೇಳಲು ಆಗುವುದಿಲ್ಲ. ಮಹಜರ್ ಕಾಲಕ್ಕೆ ಸ್ಥಳದಲ್ಲಿ ಯಾವುದೇ ಲಾರಿಗಳು ಇರಲಿಲ್ಲ. ಆ ಸ್ಥಳದಲ್ಲಿ ಎಷ್ಟು ಮರಳು ಗುಡ್ಡೆಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಮರಳುಗುಡ್ಡೆಯನ್ನು ಹೊರತುಪಡಿಸಿ ಬೇರೆ ಯಾವುದೇ ಸಲಕರಣೆಗಳು ಇರಲಿಲ್ಲ. ಆ ಮರಳು ಗುಡ್ಡೆಗಳು ಸರ್ಕಾರದಿಂದ ಲೈಸನ್ಸ್ ಪಡೆದ ಸನದ್ದುದಾರರಿಗೆ ಸೇರಿದ ಮರಳು ಗುಡ್ಡೆಗಳು ಅಂದರೆ ಸರಿ. ಆ ಮರಳು ಗುಡ್ಡೆಯ ಮಾಲೀಕರು ಯಾರು ಎಂದು ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿಯು ಚಾಸಾ-19 ಎಂದು ನುಡಿಯುತ್ತಾರೆ. ಮಹಜರ್ ಕಾಲಕ್ಕೆ ಚಾಸಾ-19 ರವರ ಕಡೆಯವರು ಯಾರು ಇರಲಿಲ್ಲ. ನಾನು ಅಥವಾ ನನ್ನ ಮೇಲಾಧಿಕಾರಿಗಳು ಚಾಸಾ-19 ರವರಿಗೆ ಮಾಹಿತಿಯನ್ನು ತಿಳಿಸಲು ಪ್ರಯತ್ನಿಸಿರಲಿಲ್ಲ.

4. ನಮ್ಮ ಕಛೇರಿಯಿಂದ ನೀಡಲಾಗುವ ಪರ್ಮಿಟ್ಟನ್ನು ಸನ್ನದ್ದುದಾರಿಗೆ ಕೊಟ್ಟು ಅಲ್ಲಿಂದ ಅದಕ್ಕೆ ಸೀಲ್ ಪಡೆದು ಮರಳನ್ನು ತುಂಬಿಕೊಂಡು ಸಾಗಾಟ ಮಾಡಲಾಗುತ್ತದೆ ಅಂದರೆ ಸರಿ. ಆ ಸಾಗಾಟದ ಸಂಬಂಧ ನಾವು ಚೆಕ್ ಪೋಸ್ಟ್ ಗಳನ್ನು ಅಳವಡಿಸಿರುತ್ತೇವೆ ಅಂದರೆ ಸರಿ. ಸದರಿ ಚೆಕ್ ಪೋಸ್ಟ್ ಗಳಲ್ಲಿ ಪರ್ಮಿಟ್ಟನ್ನು surrender ಮಾಡಬೇಕಾಗುತ್ತದೆ ಅಂದರೆ ಸರಿ. ಸ್ಥಳಕ್ಕೆ ಹೋಗಿ ನಿಪಿ-9 ರಂತೆ ಮಹಜರ್ ಮಾಡಿರುತ್ತಾರೆ ಎಂಬುದು ಸುಳ್ಳು ಅಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಸು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ಪೊಲೀಸು ಸಿಬ್ಬಂದಿ ನನಗೆ ನೋಟೀಸು ಜಾರಿ ಮಾಡಿರುತ್ತಾರೆ. ಆ ರೀತಿಯಾಗಿ ನನಗೆ ಯಾವುದೇ ನೋಟೀಸು ಜಾರಿ ಮಾಡಿಲ್ಲ

ಅಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಅಂದರೆ ಸರಿಯಲ್ಲ.

**ಪಾಟೀ ಸವಾಲು: 6 ನೇ** ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸುವುದಾಗಿ ಹೇಳಿರುತ್ತಾರೆ.

**ಮರು ವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xxx

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ